ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **29.01.2024**

ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದ

ನಾನು ಕೂಡ್ಲೂರಿನಲ್ಲಿ ವಾವಿದ್ದೇನೆ . ಆರೋಪಿ ಕೂಡಿಗೆಯಲ್ಲಿ ವಾಸವಿದ್ದಾರೆ . ನಮ್ಮ ಮನೆಯಿಂದ ಆರೋಪಿಯ ಮನೆ ಸುಮಾರು 2.50 ಕಿ ಮೀ॰ ದೂರ ಇರುತ್ತದೆ . ಆರೋಪಿ ಪಕ್ಕದ ಊರಿನವರಾದರಿಂದ ಚಿಕ್ಕಂದಿನಿಂದಲೂ ಅಂದರೆ ಸುಮಾರು 20 ವರುಷಗಳಿಂದ ಪರಿಚಯ . ನಾನು ಪಿ ಡಬ್ಲ್ಯು ಡಿ ಇಲಾಖೆಯಲ್ಲಿ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ . ಆರೋಪಿ ಸಹ ಗುತ್ತಿಗೆದಾರರು .

ಆರೋಪಿಗೆ ನಾನು ಹಣವನ್ನು ಏಪ್ರಿಲ್ 2020 ರಲ್ಲಿ ನೀಡಿದ್ದು ದಿನಾಂಕ ನನಗೆ ನೆನಪಿಲ್ಲ. ಸದರಿ ಹಣವನ್ನು ನಾನು ನನ್ನ ಮನೆಯಲ್ಲಿ ನೀಡಿರುತ್ತೇನೆ . ಆರೋಪಿ ದೊಡ್ಡ ಗುತ್ತಿಗೆಯ ಕೆಲಸ ಬಂದಿರುವುದಾಗಿ ಅದಕ್ಕೆ ಸಹಾಯ ಮಾಡುವಂತೆ ನನ್ನಿಂದ ಹಣ ಪಡೆದಿರುತ್ತಾರೆ . ನಾನು ಹಣವನ್ನು ಆರೋಪಿಗೆ ನಗಧಿನಲ್ಲಿ ನೀಡಿರುತ್ತೇನೆ . 20 ಸಾವಿರ ರೂ ಗಳಿಗೆ ಮೇಲ್ಪಟ್ಟು ಹಣವನ್ನು ನಗಧಿನಲ್ಲಿ ವ್ಯವಹರಿಸುವಂತಿಲ್ಲ ಎಂಬ ವಿಷಯ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಆರೋಪಿ ಹಣ ಬೇಕೆಂದು ಕೇಳಿದ ದಿನವೇ ಮನೆಯಲ್ಲಿ ನಗದು ಇದ್ದು ಅದನ್ನು ಆರೋಪಿಗೆ ನೀಡಿರುತ್ತೇನೆ . ನನಗೆ ಒಂದು ವಾರದ ಹಿಂದೆ ಬಿಲ್ ಆಗಿದ್ದು ಆ ಹಣವನ್ನು ಮನೆಯಲ್ಲಿಟ್ಟಿದ್ದೆ . ಆರೋಪಿಗೆ ಹಣ ನೀಡಿದಾಗ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ. 7 ಲಕ್ಷ ಹಣವನ್ನು ಯಾವ ದಿನಾಂಕದಂದು ನನ್ನ ಖಾತೆಯಿಂದ ಡ್ರಾ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಸರಕಾರದ ಯಾವುದೇ ಬಿಲ್ ಖಾತೆಯ ಮೂಲಕ ನೀಡಲಾಗುತ್ತದೆ ಎಂದರೆ ಸರಿ . ನಾನು ಪ್ರತಿವರ್ಷ ಬ್ಯಾಂಕ್ ಅಕೌಂಟ್ ಸ್ಟೇಟ್ ಮೆಂಟ್ ಹಾಗೂ ವರಮಾನ ತೆರಿಗೆ ರಿರ್ಟನ್ಸ್ ನ್ನು ಸರಕಾರಕ್ಕೆ ಹಾಜರುಪಡಿಸುತ್ತೇನೆ . ಸದರಿ ದಾಖಲೆಗಳು ನನ್ನ ಬಳಿ ಇದೆ .

ಆರೋಪಿಗೆ ಹಣ ನೀಡುವ ಸಮಯದಲ್ಲಿ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದು ಅವರು ಒಬ್ಬರೇ ಬಂದಿರುತ್ತಾರೆ . ಸದರಿ ವ್ಯವಹಾರ ಅಂದಾಜು 3-30

ರಿಂದ 4-00 ಗಂಟೆಯ ಸಮಯದಲ್ಲಿ ಆಗಿರುತ್ತದೆ . ಏಪ್ರಿಲ್ 2020 ರಲ್ಲಿ ಕೋವಿಡ್ ಲಾಕ್ ಡೌನ್ ಇದ್ದು ಅವರು ನಮ್ಮ ಮನೆಗೆ ಬಂದಿಲ್ಲ ನಾನು ಅವರಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಮಾರ್ಚ್ 25, 2020 ರಿಂದ ಮೇ 2020 ರವರೆಗೆ ಲಾಕ್‌ಡೌನ್ ಇದ್ದು ಸರಕಾರದ ಯಾವುದೇ ಬಿಲ್ ಪಾವತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಹಣ ಡ್ರಾ ಮಾಡಲು ಆ ಸಮಯದಲ್ಲಿ ಅವಕಾಶವಿರಲಿಲ್ಲ ಎಂದರೆ ಸಾಕ್ಷಿ ಗುತ್ತಿಗೆದಾರರಿಗೆ ಕೆಲವು ರಿಯಾಯಿತಿಗಳು ಇತ್ತು ಎನ್ನುವರು. ಸದರಿ ಸುತ್ತಾಲೆಗಳನ್ನು ನಾನು ನೋಡಿರುವುದಿಲ್ಲ ಸಾಮಾನ್ಯ ಜ್ಞಾನದ ಮೇಲೆ ಹೇಳುತ್ತಿದ್ದೇನೆ .

ಆರೋಪಿಗೆ ಒಂದು ತಿಂಗಳ ನಂತರ ಹಣ ಮರುಪಾವತಿಸುವಂತೆ ಕೇಳಿದಾಗ ಹಣ ಬರುತ್ತದೆ ಎಂದು ದಿನಾಂಕ 19-04-2021 ರ ದಿನಾಂಕವನ್ನು ನಮೂದು ಮಾಡಿ ಚೆಕ್ನ್ನು ನಮ್ಮ ಮನೆಗೆ ಬಂದು ನನಗೆ ನೀಡಿರುತ್ತಾರೆ . ನಿಪಿ 1 ನ್ನು ಆರೋಪಿ ಮೊದಲೇ ತುಂಬಿಸಿಕೊಂಡು ಬಂದಿದ್ದು ನನ್ನ ಸಮಕ್ಷಮ ಅದಕ್ಕೆ ಸಹಿ ಮಾಡಿರುತ್ತಾರೆ . ನಿಪಿ 4 ಎ ಯಾರದು ಎಂದು ನನಗೆ ಗೊತ್ತಿಲ್ಲ. ಆರೋಪಿ ದಿನಾಂಕ 19-04-2021 ರ ದಿನಾಂಕ ನಮೂದಿಸಿ ನೀಡಿದ ಚೆಕ್ ನ್ನು 3 ದಿನಗಳ ಮುಂಚೆ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ . ಸದರಿ ಚೆಕ್ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ವಾಪಾಸ್ಸು ಬಂದಿರುತ್ತದೆ . ಸದರಿ ಮೆಮೋವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ನಿಪಿ 1 ನ್ನು ನಾನು ಒಮ್ಮೆ ಮಾತ್ರ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ .

ನಿಪಿ 1 ಎ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ನನ್ನ ಮುಂದೆಯೇ ಸಹಿ ಮಾಡಿದ್ದು ಅವರೇ ಬೇರೆ ತರ ಸಹಿ ಮಾಡಿರಬಹುದು ಎನ್ನುವರು . ನಿಪಿ 3 ಆರೋಪಿಗೆ ತಲುಪಿಲ್ಲ . ನಿಪಿ 4 ಎ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರ ಪರವಾಗಿ ಬೇರೆಯವರು ನೋಟಿಸನ್ನು ಪಡೆದಿರುಬಹುದು ಎಂದು ನುಡಿಯುವರು .

ನಾನು ನನ್ನ ವರಮಾನ ತೆರಿಗೆ ರಿರ್ಟನ್ಸ್ ಲ್ಲಿ ನನಗೆ ಬಾಕಿ ಬರಬೇಕಾದ ಹಣ ಕಾಲಂ ನಲ್ಲಿ ಹಣವನ್ನು ತೋರಿಸಿರುತ್ತೇನೆ . ನಾನು ಪಿ ಡಬ್ಲ್ಯುಡಿ ಗುತ್ತಿಗೆದಾರನಾಗಿರುವ ಕಾರಣ ಅಕೌಂಟ್ಸ ನ್ನು ಆಡಿಟರ ಬಳಿ ಲೆಕ್ಕ ಪರಿಶೋಧನೆ ಮಾಡಿಸಬೇಕೆಂದರೆ ಸರಿ . ನಾನು ಆ ರೀತಿ ಮಾಡಿಸಿರುತ್ತೇನೆ . ಅವರಿಂದ ದೃಢಿಕರಣ ಪತ್ರ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ನನಗೂ ಮತ್ತು ಆರೋಪಿಗೂ ಈ ಪ್ರಕರಣದಲ್ಲಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಒಂದೇ ಇಲಾಖೆಯಲ್ಲಿ ಗುತ್ತಿಗೆದಾರನಾಗಿರುವುದರಿಂದ ಅಲ್ಲಿ ಸಿಕ್ಕಿದ ಒಂದು ಚೆಕ್‌ನ್ನು ದುರುಪಯೋಗ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಎ ನ್ನು ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರ ದ ನ್ಯಾ ದಂ, ಕುಶಾಲನಗರ